O.S .No. 201/2008

ಪಿ.ಡಬ್ಲ್ಯೂ-2

ದಿನಾಂಕ: 31.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀ ಎಂ.ಆರ್.ಎಲ್. ವಕೀಲರಿಂದಃ**

2 ನೇ ವಾದಿ ನನಗೆ ಚಿಕ್ಕಮ್ಮನಾಗಬೇಕು. 2 ನೇ ವಾದಿ ಈಗಲೂ ಬದುಕಿದ್ದಾರೆ. 2 ನೇ ವಾದಿ ತನ್ನ ದಿನನಿತ್ಯದ ಕೆಲಸಗಳನ್ನು ಅವರೇ ಮಾಡಿಕೊಳ್ಳುತ್ತಾರೆಂದರೆ ಸರಿಯಲ್ಲ. 2 ನೇ ವಾದಿಗೆ ಏನು ಖಾಯಿಲೆ ಇದೆ ಎಂದರೆ ಸಾಕ್ಷಿ ಗರ್ಭಕೋಶದ ಶಸ್ತ್ರ ಚಿಕಿತ್ಸೆ ಆಗಿದೆ ಎಂದು ಹೇಳುತ್ತಾರೆ. 2 ನೇ ವಾದಿಯ ಪರವಾಗಿಯೂ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತು. 2 ನೇ ವಾದಿಗೆ ಕಣ್ಣು, ಕಿವಿ ಚೆನ್ನಾಗಿದ್ದು, ಸದರಿಯವರಿಗೆ ಏನು ಆಗಿಲ್ಲ, ಚೆನ್ನಾಗಿ ಮಾತನಾಡುತ್ತಾರೆಂದರೆ ಸಾಕ್ಷಿ ಹೌದು, ಶಸ್ತ್ರ ಚಿಕಿತ್ಸೆ ಆಗಿರುವುದರಿಂದ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎಂದು ಹೇಳುತ್ತಾರೆ. ಈ ಮೇಲೆ ಹೇಳಿದ ಕಾರಣಗಳಿಂದಾಗಿ, 2 ವಾದಿಯ ಪರವಾಗಿಯೂ ಸಾಕ್ಷ್ಯ ನುಡಿಯುತ್ತಿದ್ದೇನೆಂದು ನಿಮ್ಮ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ನಿಮ್ಮ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ.

ವಾದ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಾ ಎಂದರೆ ಸಾಕ್ಷಿ ನನ್ನ ತಾಯಿಯ ಭಾಗವನ್ನು ನಮಗೆ ಬರಬೇಕು ಎಂದು ಹೂಡಿರುತ್ತೇವೆ ಎಂದು ಹೇಳುತ್ತಾರೆ. ದಾವೆಯನ್ನು ಸ.ನಂ.93, 94 ಮತ್ತು 99 ರ ವಿರುದ್ಧ ಹೂಡಿರುತ್ತೇನೆ.

ಚಕ್ಕರ ಸಿದ್ದಯ್ಯ ಗೊತ್ತು, ಅವರು ನನ್ನ ತಾತ. ಕಾಳಮ್ಮ, ಚಕ್ಕರಸಿದ್ದಯ್ಯ ರವರ ಹೆಂಡತಿ ಎಂದರೆ ಸಾಕ್ಷಿ ನನ್ನ ತಾಯಿ ಹಾಗೆ ಹೇಳುತ್ತಿದ್ದರು ಎಂದು ಹೇಳುತ್ತಾರೆ. ಕಾಳಮ್ಮ ಹಾಗೂ ಚಕ್ಕರ ಸಿದ್ದಯ್ಯ ರವರಿಗೆ 4 ಜನ ಗಂಡು ಮಕ್ಕಳು ಎಂದರೆ ಸಾಕ್ಷಿ ಮೂರು ಜನ ಎಂದು ನಮ್ಮ ತಾಯಿ ಹೇಳುತ್ತಿದ್ದರು ಎಂದು ಹೇಳುತ್ತಾರೆ. ಕಾಳಮ್ಮ, ಚಕ್ಕರಸಿದ್ದಯ್ಯ ರವರಿಗೆ ಚಕ್ಕರಜೋಗಯ್ಯ, ಕುಳ್ಳಯ್ಯ, ಜವರಯ್ಯ ಮತ್ತು ವೆಂಕಟಯ್ಯ ಎಂಬ 4 ಜನ ಮಕ್ಕಳು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಾವಾ ಆಸ್ತಿಗಳನ್ನು ಚಕ್ರ ಇನಾಮ್ತಿಗಾಗಿ ಸರ್ಕಾರದಿಂದ ಮಂಜೂರು ಮಾಡಲಾಗಿತ್ತು. ಚಕ್ರಜೋಗಯ್ಯನಿಗಿಂತ ಮುಂಚಿತವಾಗಿ ಅವರ ತಂದೆ ಚಕ್ರಸಿದ್ದಯ್ಯ ಕುಳವಾಡಿಕೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಕ್ರಸಿದ್ದಯ್ಯನಿಗೆ

ಚಕ್ರಜೋಗಯ್ಯ ಹಿರಿಮಗ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವೆಯಲ್ಲಿ ಕುಳ್ಳಯ್ಯ ಮತ್ತು ಕುಳ್ಳಯ್ಯನ ಮಕ್ಕಳನ್ನು ಯಾವ ಕಾರಣಕ್ಕಾಗಿ ಪಕ್ಷಗಾರರಾಗಿ ಮಾಡಲಾಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ವೆಂಕಟಯ್ಯ ಮತ್ತು ಅವರ ವಾಸರುದಾರರನ್ನು ಯಾವ ಕಾರಣಕ್ಕಾಗಿ ಪಕ್ಷಗಾರರಾಗಿ ಮಾಡಲಾಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

**(**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ**,** ಆಲಿಸಿ ಅನುಮತಿಸಲಾಯಿತು**.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.